ಟಿ.ಎಂ. ಮಾನಪ್ಪ, ಶಿವಮೊಗ್ಗ
ಕಾಗೆ ಹಂಚಿ ತಿನ್ನುತ್ತದೆ. ಮನುಷ್ಯ?



ಹೊಂಚಿ ತಿನ್ನುತ್ತಾನೆ.

ಎ.ಕೆ. ಪಟ್ಟಾಭಿ, ಬೆಂಗಳೂರು
'ಗಂಡಹೆಂಡಿರ ಜಗಳ ಉಂಡು ಮಲಗುವ ತನಕ' ಅಣ್ಣತಮ್ಮಂದಿರ ಜಗಳ?
ಆಸ್ತಿ ಕರಗುವ ತನಕ.

ಕೆ.ಪಿ. ರಾಮಗುಂಡಿ, ಬೈಲಹೊಂಗಲ
ಕುರುಡರೂ ದೇವಸ್ಥಾನಕ್ಕೆ ಬರುತ್ತಾರೆ. ಅವರಿಗೆ ದೇವರು ಕಾಣಿಸುತ್ತಾನೆಯೆ?
ಕುರುಡರಿಗೆ ಕುಂತಲ್ಲೇ ದೇವಸ್ಥಾನ. ಅವರು ಬರುವುದು ಇತರರಿಗೆ ಕಾಣುವನೋ ಇಲ್ಲವೋ ಎಂದು ತಿಳಿಯಲು.

ವಿ. ಹೇಮಂತಕುಮಾರ್, ಬೆಂಗಳೂರು
ಸರ್ಕಾರದಲ್ಲಿ ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ಇರುವಂತೆ ಸಂಸಾರದಲ್ಲಿ ಪತ್ನಿ, ಉಪಪತ್ನಿ ಇರುವುದು ತಪ್ಪಾ?



ಸರ್ಕಾರದಷ್ಟೇ ಸಂಸಾರವೂ ಕುಲಗೆಟ್ಟು ಹಾಳಾಗಬೇಕೆಂಬ ಆಲೋಚನೆಯಿದ್ದರೆ, ತಪ್ಪಿಲ್ಲ.

ಶ್ರುತಿ ರಿಗ್ರೆಟ್ ಅಯ್ಯರ್, ಬೆಂಗಳೂರು
ಬುದ್ಧಿ ಕೈಯಲ್ಲಿ ಇರಬೇಕು. ಏಕೆ?
ಮೌಢ್ಯ/ಅಜ್ಞಾನದಿಂದ ಬೆದರಿ ಕಾಲಿಗೆ ಬುದ್ಧಿ ಹೇಳುವುದನ್ನು ತಪ್ಪಿಸಲು.

ಎಂ.ಜಿ. ನೇಹವರ್ಷಿಣಿ, ಬಳ್ಳಾರಿ
ಸುಖವನ್ನು ಕಷ್ಟ ಹಿಂಬಾಲಿಸುತ್ತೆ. ನಗುವನ್ನು?
ಮತ್ತಷ್ಟು ನಗು. ಹೂಡಿದಷ್ಟೂ ಹೆಚ್ಚುವ ಬಂಡವಾಳವೇ ನಗು.

ಮಲ್ಲಿಕಾರ್ಜುನ ಹ. ಬಗಲಿ, ಜತ್ತ
ಪ್ರಥಮರಾತ್ರಿಯ ದಿನ ಶಯನಗೃಹದಲ್ಲಿ ಹಣ್ಣುಗಳನ್ನೇಕೆ ಇಟ್ಟಿರುತ್ತಾರೆ?
ಅವುಗಳಷ್ಟೇ ರಸಮಯತೆ ದಂಪತಿಯಲ್ಲೂ ಇರಲೆಂದು ಸೂಚಿಸಲು.

ಎಸ್.ಎ.ಮೋಹನರಾಜು, ಶಂಕರಘಟ್ಟ
ವಿಧಿಯ ಆಟ ಮೇಲೋ, ನಿಧಿಯ ಆಟ ಮೇಲೋ?
ನಿಧಿಯದೇ; ನಿಧಿವಶನಾದವ ಮೇಲು; ವಿಧಿವಶನಾದವನು ಎಂದೂ ಕೆಳಗೇ.

ನರಸಿಂಹ ಪೈ, ಕಾಸರಕೋಡ
ಹುಟ್ಟು ದಾರಿದ್ರ್ಯವಾದರೆ ಸಾವು ಚರಿತ್ರೆಯಾಗಬೇಕು ಎನ್ನುವರಲ್ಲಾ...?
ಇದಕ್ಕೆ ಜೈಲಿನಲ್ಲಿ ಹುಟ್ಟಿ ಜಗವನ್ನು ಜಯಿಸಿದ ಶ್ರೀಕೃಷ್ಣನೇ ಪ್ರೇರಕ.

ಎನ್. ವೈದೇಹಿ ಶೇಖರ್, ಮೈಸೂರು
ವಿದುರನ ಮರುವಿವಾಹಕ್ಕೆ ತೋರುವ ಆತುರ, ಆಸಕ್ತಿಯನ್ನು ವಿಧವೆಯ ಮರುವಿವಾಹಕ್ಕೇಕೆ ತೋರುವುದಿಲ್ಲ?
ಮೊದಲ ವಿವಾಹದ ಸಾಲವೇ ತೀರಿರುವುದಿಲ್ಲವಲ್ಲ.

ರತ್ನಾ ರಾಜ್‌ಕುಮಾರ್, ಹಾಸನ
ವಾಕ್ ಎಂಬ ನೆಪದಲ್ಲಿ ಮನಸೋಯಿಚ್ಛೆ ಹರಟೆ ಹೊಡೆಯುವವರಿಗೆ ನಿಮ್ಮ ಸಲಹೆ.....?
ಸರಿಯೇ ಇದೆಯಲ್ಲ. ವಾಕ್ಕೆನಲ್ ನುಡಿಯೇ; ಅದು ಇಂಗ್ಲಿಷೆಂದುಕೊಂಡದ್ದು ನಿಮ್ಮ ತಪ್ಪು.

ಎನ್.ಕೆ. ಹೆಬ್ಬಾರ, ಕೋಣೆ
ವಾಹಿನಿಗಳ ಕಾಮಿಡಿ ವಿಭಾಗದಲ್ಲಿ ಹಾಸ್ಯದ ತುಣುಕುಗಳನ್ನು ಹೇಳುವವರೇ ಬಾಯ್ತುಂಬಾ ನಗುತ್ತಾರಲ್ಲ, ಏಕೆ?
ಸೆಲ್ಫ್ ಸರ್ವೀಸ್! ಸತ್ವಹೀನ ಜೋಕ್, ರಸಹೀನ ಮಂಡಣೆಗೆ ಬೇರಾರೂ ನಗುವುದಿಲ್ಲವೆಂದು ಅವರಿಗೆ ತಿಳಿದಿದೆ.

ಸೃಜನ ಜೈನ್, ಹೂವಿನಹಡಗಲಿ
ವಿಜ್ಞಾನದ ಪ್ರಕಾರವು ಪ್ರಶ್ನಿಸುವವರನ್ನು ಹೇಗೆ ನೋಡುತ್ತದೆ ರಾಮ್?
ಗೌರವದಿಂದ. ಪ್ರಶ್ನಿಸುವ ಬುದ್ಧಿಯೇ ಸಂಶೋಧನೆಗಳ ತಾಯಿ.

## ಬಹುಮಾನಿತ ಪ್ರಶ್ನೆ

ಸಿಹಿಮೊಗ್ಗೆ ರಮೇಶ್, ಮೈಸೂರು
ಬೆಂಕಿಯ ಮುಂದೆ ಇಟ್ಟ ಬೆಣ್ಣೆ, ಕುಡುಕರ ಮುಂದೆ ಇಟ್ಟ ಎಣ್ಣೆ, ಎರಡೂ ಉಳಿಯುವುದು ಕಷ್ಟ. ಏನಂತೀರಿ?
ಮೂರನೆಯದನ್ನೂ ಸೇರಿಸಿ; ಎಣ್ಣೆಯ ಮುಂದೆಯೇ ಕುಳಿತ ಕುಡುಕರೂ ಉಳಿಯುವುದು ಕಷ್ಟ.

ಎಂ.ಎಸ್. ಉಷಾ ಪ್ರಕಾಶ್, ಮೈಸೂರು
ಪರೀಕ್ಷಾಸಮಯದಲ್ಲಿ ನನಗೆ ಮರೆವು; ಅಮ್ಮನಿಗೆ ಕೋಪ; ಅಪ್ಪನಿಗೆ ದಿಗ್ಭ್ರಮೆ. ಇವುಗಳಿಗೆ ಪರಿಹಾರ?
ಕಂಬೈನ್ಡ್ ಸ್ಟಡಿಗೆಂದು ಹೊರಹೋಗಿ. ಅಪ್ಪ, ಅಮ್ಮ ತಮ್ಮತಮ್ಮ ವಾಟ್ಸ್ಯಾಪ್‌ಗಳಲ್ಲಿ ಮುಳುಗಿ ತೆಪ್ಪಗಿರುತ್ತಾರೆ.

ನಾರಾಯಣ ಯಾಜಿ, ಶಿರಾಲಿ
ಹೆಂಡತಿ ಸಂಸಾರಕ್ಕೆ ಭೂಷಣವಂತೆ. ಗಂಡನ ಬಗ್ಗೆ ಏನನ್ನೂ ಹೇಳಲಿಲ್ಲ. ಇದೆಂಥ ನ್ಯಾಯ?
ಭೂಷಣವೆಂದರೆ ಅಲಂಕಾರವಲ್ಲವೆ! ಮೂಲ(ಲೆ)ಮೂರ್ತಿ ಗಂಡನೇ.

ಬಿ. ಚಂದ್ರೇಗೌಡ, ಬೆಂಗಳೂರು
ರಾಜಕೀಯಕ್ಕೂ, ಚದುರಂಗಕ್ಕೂ ಏನು ಸಂಬಂಧ?



ಆಟ ಮುಗಿಯುತ್ತಿದ್ದಂತೆ ಎರಡೂ ಬಣಗಳದು ಒಂದೇ ಬಾಕ್ಸಿನಲ್ಲಿ ಸಮ್ಮಿಶ್ರ ವಾಸ.

ವ. ಉಮೇಶ ಕಾರಂತ, ಮಂಗಳೂರು
'ನನ್ನೊಳಗೆ ನಾನಿಲ್ಲವಾದರೆ ಬದುಕುವುದಾದರೂ ಏಕೆ?
ನಮ್ಮೊಳಗೆ ನಾವಿದ್ದರೆ ಜೀವನ ದಂಡ; ಎಲ್ಲರಲ್ಲಿ ನಾವಿದ್ದರೆ ಮಾತ್ರ ಸಾರ್ಥಕ ಬದುಕು.

ಸುನಿತಾ ಬಾಣಿ, ಕೊಮ್ಮಘಟ್ಟ
ಮಾತಿನಲ್ಲೇ ಮಂಟಪ ಕಟ್ಟುವವರಿಗೆ ಕೆಲಸ ಕಲಿಸುವುದು ಹೇಗೆ?
ಕಿವಿ ಮುಚ್ಚಿಕೊಂಡು!

■ ರಾಮ್